ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 69-75
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪರಿಶಿಷ್ಟ ಜಾತಿ ವಕೀಲರ ಕೌಟುಂಬಿಕ ಹೊಣೆಗಾರಿಕೆಯ ಸವಾಲುಗಳು : ಸಮಾಜಶಾಸ್ತ್ರೀಯ ಅಧ್ಯಯನ

**ಅಭಿಷೇಕ್ ಬಿ[1] ಮತ್ತು ಡಾ. ಚಂದ್ರಶೇಖರ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಪ್ರಾಧ್ಯಾಪಕರು
ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ,

***Abstract:***
*ನ್ಯಾಯಾಂಗ ವ್ಯವಸ್ಥೆಯಲ್ಲಿ ಶೋಷಿತ ಸಮುದಾಯಗಳ ಧ್ವನಿಯಾಗಿ ಹೊರಹೊಮ್ಮುತ್ತಿರುವ ಪರಿಶಿಷ್ಟ ಜಾತಿಯ ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದರೆ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯಿಂದ ಬರುವ ಈ ಮೊದಲ ತಲೆಮಾರಿನ ವಕೀಲರಿಗೆ ವಕಾಲತ್ತು ವೃತ್ತಿ ಎಂಬುದು ನಿರಂತರ ಸವಾಲುಗಳ ಹಾದಿಯಾಗಿದೆ. ಇವರು ನ್ಯಾಯಾಲಯದ ಒಳಗೆ ಕಕ್ಷಿದಾರರ ಹಕ್ಕುಗಳಿಗಾಗಿ ಹೋರಾಡುವ ಮುನ್ನ, ಹೊರಗೆ ತಮ್ಮದೇ ಆದ ಕೌಟುಂಬಿಕ ಹೊಣೆಗಾರಿಕೆಗಳು ಮತ್ತು ಆರ್ಥಿಕ ಜವಾಬ್ದಾರಿಗಳ ವಿರುದ್ಧ ಹೋರಾಡಬೇಕಾಗುತ್ತದೆ. ಇಂತಹ ಹೋರಾಟದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.*

**Keywords:** *ಕೌಟುಂಬಿಕ ಹೊಣೆಗಾರಿಕೆ, ಪರಿಶಿಷ್ಟ ಜಾತಿ, ವಕೀಲರು, ನ್ಯಾಯಾಂಗ ವ್ಯವಸ್ಥೆ*

## ಪೀಠಿಕೆ

ಭಾರತೀಯ ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ಸಮಾನತೆ, ನ್ಯಾಯ ಮತ್ತು ಸಮಾನ ಅವಕಾಶಗಳ ಹಕ್ಕುಗಳನ್ನು ನೀಡಿದೆ. ಕಾನೂನು ಕ್ಷೇತ್ರವು ಸಮಾಜಕ್ಕೆ ನ್ಯಾಯ ಒದಗಿಸುವ ಮತ್ತು ಸಾಮಾಜಿಕ ಬದಲಾವಣೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ, ಐತಿಹಾಸಿಕವಾಗಿ ವಂಚನೆಗೆ ಒಳಗಾಗಿರುವ ಪರಿಶಿಷ್ಟ ಜಾತಿಯ ಸಮುದಾಯದ ವಕೀಲರು ಇಂದಿಗೂ ಕಾನೂನು ವೃತ್ತಿಯಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿಯೂ ಮುಖ್ಯವಾಗಿ ಆರ್ಥಿಕ ಸಮಸ್ಯೆಗಳು ಅವರ ವೃತ್ತಿಪರ ಬೆಳವಣಿಗೆಗೆ ದೊಡ್ಡ ಅಡ್ಡಿಯಾಗಿವೆ. ವಕೀಲ ವೃತ್ತಿಯ ಆರಂಭಿಕ ದಿನಗಳಲ್ಲಿ ಸ್ಥಿರ ಆದಾಯ ಇಲ್ಲದಿರುವುದು, ಸ್ವಂತ ಕಚೇರಿ ಸ್ಥಾಪನೆಗೆ ಬಂಡವಾಳದ ಕೊರತೆ, ಮತ್ತು ಸಾಂಪ್ರದಾಯಿಕವಾಗಿ ಪ್ರಭಾವಿ ವಕೀಲರ ಹಿಡಿತದಲ್ಲಿರುವ ನ್ಯಾಯಾಲಯದ ವಾತಾವರಣವು ಪರಿಶಿಷ್ಟ ಜಾತಿಯ ಯುವ ವಕೀಲರನ್ನು ಆರ್ಥಿಕವಾಗಿ ಮತ್ತಷ್ಟು ಕುಗ್ಗಿಸುತ್ತಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕಾದರೆ, ನ್ಯಾಯಾಂಗ ವ್ಯವಸ್ಥೆಯಲ್ಲಿ ಎಲ್ಲಾ ವರ್ಗದ ಪ್ರಾತಿನಿಧ್ಯ ಇರಬೇಕು. ಆದರೆ ಆರ್ಥಿಕ ಅಸಮಾನತೆಯು ಪರಿಶಿಷ್ಟ ಜಾತಿಯ ವಕೀಲರು ಮುನ್ನಡೆಯಲು ತಡೆಯೊಡ್ಡುತ್ತಿದೆ. ಈ ಹಿನ್ನೆಲೆಯಲ್ಲಿ, ಪರಿಶಿಷ್ಟ

***Please cite this article as:*** ಅಭಿಷೇಕ್ ಬಿ ಮತ್ತು ಚಂದ್ರಶೇಖರ್. (2026). ಪರಿಶಿಷ್ಟ ಜಾತಿ ವಕೀಲರ ಕೌಟುಂಬಿಕ ಹೊಣೆಗಾರಿಕೆಯ ಸವಾಲುಗಳು: ಸಮಾಜಶಾಸ್ತ್ರೀಯ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(2), 69–75

ಜಾತಿಯ ವಕೀಲರು ಎದುರಿಸುತ್ತಿರುವ ಕೌಟುಂಬಿಕ ಹೊಣೆಗಾರಿಕೆಗಳು, ಆರ್ಥಿಕ ಬಿಕ್ಕಟ್ಟುಗಳು, ಅದಕ್ಕೆ ಕಾರಣಗಳು ಮತ್ತು ಅವುಗಳ ಪ್ರಭಾವವನ್ನು ವಿವರವಾಗಿ ಅಧ್ಯಯನ ಮಾಡುವುದು ಅತ್ಯಂತ ಪ್ರಸ್ತುತವಾಗಿದೆ.

**ಸಾಹಿತ್ಯ ಅವಲೋಕನ**

ಪ್ರಭು (2002) ರವರು ತಮ್ಮ 'ವಕೀಲರ ಕಾನೂನು ಸಂಬಂಧಿ ನೀತಿ ನಿಯಮಗಳ ಕೈಪಿಡಿ' ಗ್ರಂಥದಲ್ಲಿ ವಕೀಲರು ಪಾಲಿಸಲೇಬೇಕಾದ ನೀತಿ ನಿಯಮಗಳನ್ನು ಕುರಿತು ವಿವರಿಸಿದ್ದಾರೆ. ಕಾನೂನು ವೃತ್ತಿಯಲ್ಲಿ ಪಾಲಿಸಲೇಬೇಕಾದರೆ ಅವರಿಗಿರುವ ಕನಿಷ್ಟ ಅರ್ಹತೆಗಳು, ಶೈಕ್ಷಣಿಕ ಪರಿಪೂರ್ಣತೆಯನ್ನೊಳಗೊಂಡಂತೆ ಹಲವಾರು ಔಪಚಾರಿಕ ನೀತಿ ನಿಯಮಗಳನ್ನು ಕುರಿತು ಇವರು ವಿವರವಾಗಿ ತಿಳಿಸಿಕೊಟ್ಟಿದ್ದಾರೆ. ಗ್ರಂಥದ ಆದಿಭಾಗದಲ್ಲಿ ವಕೀಲ ವೃತ್ತಿಯ ಹುಟ್ಟಿನ ಹಿಂದಿನ ಉಗಮ ಮತ್ತು ಬೆಳವಣಿಗೆಗೆ ಸಂಬಂಧಪಟ್ಟಂತೆ ಹಲವಾರು ಅಂಶಗಳನ್ನು ಕುರಿತು ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿದ್ದಾರೆ. ವಕೀಲ ವೃತ್ತಿಯ ಪ್ರಸ್ತುತತೆಯನ್ನು ಕುರಿತು ಚರ್ಚಿಸುವಾಗ ಸಮಾಜದಲ್ಲಿರುವಂತೆ ಆ ವೃತ್ತಿಯ ಮಹತ್ವ, ಸಮಸ್ಯೆಗಳು, ಅವಶ್ಯಕತೆ ಹೇಗಿವೆ ಎಂಬ ಹಲವಾರು ಅಂಶಗಳನ್ನೇ ಕೇಂದ್ರಿಕರಿಸಿ ವಾದವನ್ನು ಮಂಡಿಸಿದ್ದಾರೆ. ಮಹಿಳೆ ಮತ್ತು ಪುರುಷರ ಸಂಖ್ಯಾ ಪ್ರಮಾಣದ ಕುರಿತು ಅಂಕಿ–ಅಂಶಗಳನ್ನು ಇಲ್ಲಿ ನೀಡಿದ್ದಾರೆ. ತದನಂತರದಲ್ಲಿ ಶೈಕ್ಷಣಿಕ ಮಟ್ಟವನ್ನು ಪೂರೈಸಿದ ನಂತರ ವೃತ್ತಿಯಾಗಿ ಏಕೆ ವಕೀಲ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಪ್ರಶ್ನೆಗೆ ಆ ವೃತ್ತಿಯ ಅನುಕೂಲತೆ ಹೇಗಿದೆ ಎಂಬುದನ್ನೇ ಉತ್ತರವಾಗಿ ನೀಡಿದ್ದಾರೆ. ವಕೀಲ ವೃತ್ತಿಗೆ ಸೇರಲು ಇರಬೇಕಾದ ಅರ್ಹತೆಗಳನ್ನು ಕುರಿತು ಇಲ್ಲಿ ಚಿತ್ರಿಸಿದ್ದಾರೆ. ಕಕ್ಷಿದಾರ ಹಾಗೆಯೇ ವಕೀಲರ ನಡುವೆ ಇರುವಂತಹ ನೀತಿ ನಿಯಮಗಳಿಗೆ ಹೆಚ್ಚಿನ ಒತ್ತು ನೀಡಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಈ ಗ್ರಂಥವು ವಕೀಲ ವೃತ್ತಿಯಲ್ಲಿ ತೊಡಗಿಕೊಳ್ಳಲು ಯಾವೆಲ್ಲಾ ನೀತಿ ನಿಯಮಗಳಿವೆ, ಕಾನೂನಾತ್ಮಕ ಚೌಕಟ್ಟುಗಳಿವೆ, ಔಪಚಾರಿಕವಾದಂತಹ ನಿಯಂತ್ರಣಗಳಿವೆ ಇಂತಹ ಅಂಶಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕಟ್ಟಿಕೊಟ್ಟಿದ್ದಾರೆ.

'ಅಮೆರಿಕನ್ ಬಾರ್ ಅಸೋಸಿಯೇಷನ್' ರವರು ದಕ್ಷಿಣ ಏಷ್ಯಾದಲ್ಲಿ ದಲಿತ ವಕೀಲರ ಸ್ಥಿತಿಗತಿಗಳ ಕುರಿತು ನಡೆಸಿದ ಅಧ್ಯಯನದ ಪ್ರಕಾರ, ಶೇ. 75 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿಯ ವಕೀಲರು ತಮ್ಮ ಕುಟುಂಬದಲ್ಲಿ ಮೊದಲ ಬಾರಿಗೆ ಕಾನೂನು ಪದವಿ ಪಡೆದವರಾಗಿದ್ದಾರೆ. ಈ ಸಂಶೋಧನೆಯು ಸ್ಪಷ್ಟಪಡಿಸುವಂತೆ, ಕೌಟುಂಬಿಕವಾಗಿ ಯಾವುದೇ ಕಾನೂನು ಹಿನ್ನೆಲೆ ಅಥವಾ "ಮಾರ್ಗದರ್ಶಕರು" ಇಲ್ಲದಿರುವುದು ಅವರ ವೃತ್ತಿಜೀವನದ ಆರಂಭಿಕ ಹಂತದಲ್ಲಿ ಕೌಟುಂಬಿಕ ಬೆಂಬಲ ಸಿಗದಿರಲು ಮತ್ತು ತೀವ್ರ ಆರ್ಥಿಕ ಮುಗ್ಗಟ್ಟಿಗೆ ಪ್ರಮುಖ ಕಾರಣವಾಗಿದೆ.

ಎಸ್‌ಎಸ್‌ಆರ್‌ಎನ್ ಮತ್ತು ಇವಿಎ ಫೌಂಡೇಶನ್ ಸಂಶೋಧನಾ ಪ್ರಬಂಧ (2025)ವು ಕೆಳ ಹಂತದ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುವ ವಕೀಲರ ಕುರಿತಾದ ಇತ್ತೀಚಿನ ಅಧ್ಯಯನವು ಪರಿಶಿಷ್ಟ ಜಾತಿಯ ವಕೀಲರು ಎದುರಿಸುವ ಆರ್ಥಿಕ ಸವಾಲುಗಳನ್ನು ಎತ್ತಿ ತೋರಿಸುತ್ತದೆ. ವಕಾಲತ್ತಿನ ಪ್ರಾರಂಭದ 3 ರಿಂದ 5 ವರ್ಷಗಳಲ್ಲಿ ಸ್ಥಿರ ಆದಾಯವಿಲ್ಲದಿರುವುದು, ಬಡತನದ ಹಿನ್ನೆಲೆಯಿಂದ ಬಂದ ಕುಟುಂಬಗಳಿಗೆ ತೀವ್ರ ಹೊರೆಯಾಗುತ್ತದೆ ಎಂದು ಈ ಅಧ್ಯಯನ ಹೇಳುತ್ತದೆ. ಪೋಷಕರ ಆರೋಗ್ಯ, ಒಡಹುಟ್ಟಿದವರ ಶಿಕ್ಷಣದ ಜವಾಬ್ದಾರಿ ಮತ್ತು ಸ್ವಂತ ಕಚೇರಿ ಸ್ಥಾಪನೆಯ ವೆಚ್ಚಗಳ ನಡುವೆ ಸಿಲುಕುವ ಇವರು ತೀವ್ರ ಕೌಟುಂಬಿಕ ಕಲಹ ಮತ್ತು ಮಾನಸಿಕ ಖಿನ್ನತೆಗೆ ಒಳಗಾಗುತ್ತಾರೆ ಎಂದು ಸಂಶೋಧನೆಗಳು ದೃಢಪಡಿಸಿವೆ.

ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಮತ್ತು ಇತ್ತೀಚಿನ ಲಿಂಗ ಆಧಾರಿತ ವರದಿಗಳು (2026) ಪರಿಶಿಷ್ಟ ಜಾತಿಯ ವಕೀಲರ ಸ್ಥಿತಿ ಇನ್ನೂ

ಗಂಭೀರವಾಗಿದೆ. ಇವರು ಒಂದೆಡೆ ಜಾತಿ ತಾರತಮ್ಯ, ಇನ್ನೊಂದೆಡೆ ಲಿಂಗ ತಾರತಮ್ಯದ ಜೊತೆಗೆ ಕೌಟುಂಬಿಕವಾಗಿ ಮದುವೆ, ಮಕ್ಕಳ ಪಾಲನೆಯ ಜವಾಬ್ದಾರಿಗಳನ್ನು ಒಟ್ಟಿಗೆ ನಿಭಾಯಿಸಬೇಕಾಗುತ್ತದೆ. ವೃತ್ತಿಪರ ನೆಟ್‌ವರ್ಕಿಂಗ್‌ಗೆ ಸಮಯ ನೀಡಲಾಗದೆ ಇವರು ವೃತ್ತಿಯಿಂದಲೇ ದೂರ ಸರಿಯುವ ಪ್ರಮಾಣ ಹೆಚ್ಚಿದೆ ಎಂದು ವರದಿಗಳು ಸಾಬೀತುಪಡಿಸಿವೆ.

**ಅಧ್ಯಯನದ ಉದ್ದೇಶಗಳು**

1. ಪರಿಶಿಷ್ಟ ಜಾತಿ ವಕೀಲರ ಕೌಟುಂಬಿಕ ಹಿನ್ನೆಲೆಯನ್ನು ತಿಳಿಯುವುದು.
2. ಪರಿಶಿಷ್ಟ ಜಾತಿ ವಕೀಲರು ತಮ್ಮ ಕುಟುಂಬ ನಿರ್ವಹಣೆಯಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ವಿಶ್ಲೇಷಿಸುವುದು.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ ವಿಧಾನಗಳನ್ನು ಬಳಸಿಕೊಂಡು ಕ್ಷೇತ್ರ ಅಧ್ಯಯನ ಕೈಗೊಂಡು ಗುಣಾತ್ಮಕ ಮತ್ತು ಪರಿಮಣಾತ್ಮಕ ಮಾಹಿತಿಯನ್ನು ಸಂಗ್ರಹಿಸಲು ಮಾಹಿತಿದಾರರಿಗೆ ಸಂದರ್ಶನ ಅನುಸೂಚಿ ಮತ್ತು ಅವಲೋಕನದ ತಂತ್ರದ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಮಾದರಿ ಆಯ್ಕೆ**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಆಯ್ಕೆ ಮಾಡಿಕೊಂಡ ಅಧ್ಯಯನಕ್ಕೆ ಪೂರಕವಾಗುವಂತಹ 60 ಜನ ಪ್ರತಿವರ್ತಿಗಳನ್ನು ವಿಶ್ವ ಮಾದರಿ ವಿಧಾನದ ಮೂಲಕ ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿ ಸಂಗ್ರಹಣೆಯ ಮೂಲಗಳು**

ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಣೆ ಮಾಡುವುದು ಸೂಕ್ತವಾಗಿರುತ್ತದೆ. ಮಾಹಿತಿ ಸಂಗ್ರಹಣೆಯಲ್ಲಿ ಮುಖ್ಯವಾಗಿ ಪ್ರಾಥಮಿಕ ಮೂಲಗಳಾದ ಸಂದರ್ಶನ ಅನುಸೂಚಿ ಮತ್ತು ಅವಲೋಕನ ತಂತ್ರಗಳನ್ನು ಹಾಗೂ ಅನುಶಂಗಿಕ ಮಾಹಿತಿ ಮೂಲಗಳಾದ ಕರ್ನಾಟಕ ಬಾರ್ ಕೌನ್ಸಿಲ್ ಅಸೋಸಿಯೇಸನ್ ನಿಂದ ಅಂಕಿ ಅಂಶಗಳ ನೋಟ, ಲೇಖನಗಳು, ಗ್ರಂಥಗಳು ಮತ್ತು ಜನಗಣತಿ ದಾಖಲೆಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

**ಮಾಹಿತಿ ವಿಶ್ಲೇಷಣೆ**

ಪ್ರಾಥಮಿಕ ಮತ್ತು ಅನುಸಂಗಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಕ್ರೂಢೀಕರಿಸಿ ಸೂಕ್ತವಾದ ಕೋಷ್ಟಕಗಳ ಮೂಲಕ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

**ಕುಟುಂಬಕ್ಕೆ ಮೀಸಲಿಟ್ಟ ಸಮಯದ ಬಗ್ಗೆ**

ಸಾಮಾನ್ಯವಾಗಿ ವಕೀಲರು ಬಹುಮುಖದ ಪಾತ್ರಗಳನ್ನು ನಿರ್ವಹಿಸುತ್ತಾರೆ. ಇದರಿಂದ ಅವರು ವಿವಿಧ ಪಾತ್ರಗಳಿಗೆ ಸಂಬಂದಿಸಿದಂತೆ ಜವಾಬ್ದಾರಿಗಳನ್ನು ನಿಭಾಯಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯ ವಕೀಲರು ಬಹು ಪಾತ್ರಗಳನ್ನು ನಿರ್ವಹಿಸುವುದರ ಜೊತೆಗೆ ಕುಟುಂಬಕ್ಕೆ ಸಮಯವನ್ನು ಮೀಸಲಿಡಲಾಗುತ್ತದೆ ಎನ್ನುವ ಪ್ರತಿಕ್ರಿಯೆಯನ್ನು ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾಗಿದೆ.

**ಕೋಷ್ಟಕ 1: ಕೆಲಸ ಕಾರ್ಯದ ನಡುವೆ ಪರಿಶಿಷ್ಟ ಜಾತಿಯ ವಕೀಲರು ಕುಟುಂಬಕ್ಕೆ ಮಿಸಲಿಟ್ಟ ಸಮಯದ ವಿವರ.**

| ಅಭಿಪ್ರಾಯ | ಆವೃತ್ತಿ | ಶೇಕಡವಾರು |
|---|---|---|
| ಹೌದು | 21 | 35.0 |
| ಕೆಲವೊಮ್ಮೆ | 36 | 60.0 |
| ಇಲ್ಲ | 3 | 5.0 |
| ಒಟ್ಟು | 60 | 100.0 |

ಈ ಮೇಲಿನ ಕೋಷ್ಟಕವು ಪರಿಶಿಷ್ಟ ಜಾತಿಯ ವಕೀಲರು ತಮ್ಮ ಕೆಲಸದ ನಡುವೆ ಕುಟುಂಬಕ್ಕಾಗಿ ಸಮಯವನ್ನು ಮೀಸಲಿಟ್ಟಿರುವುದರ ವಿವರವನ್ನು ತಿಳಿಸುತ್ತದೆ. ಶೇಕಡ 60ರಷ್ಟು ಪರಿಶಿಷ್ಟ ಜಾತಿಯ ವಕೀಲರು ತಮ್ಮ ಕುಟುಂಬಕೊಸ್ಕರ ಕೆಲವು

ಸಮಯವನ್ನು ಮಾತ್ರ ಮೀಸಲಿಟ್ಟಿದ್ದೇವೆ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಶೇಕಡ 5ರಷ್ಟು ಮಾತ್ರ ಪರಿಶಿಷ್ಟ ಜಾತಿಯ ವಕೀಲರು ಸಮಯವನ್ನು ಕುಟುಂಬಕ್ಕಾಗಿ ಮೀಸಲಿಡದೆ ಇರುವುದು ಕಂಡು ಬಂದಿದೆ. ಆದರೆ ಶೇಕಡ 35ರಷ್ಟು ಪರಿಶಿಷ್ಟ ಜಾತಿಯ ವಕೀಲರು ತಮ್ಮ ವೃತ್ತಿಯ ನಡುವೆ ಕುಟುಂಬಕ್ಕಾಗಿ ಸಮಯವನ್ನು ಮೀಸಲಿಟ್ಟಿದ್ದಾರೆ ಎಂದು ತಿಳಿದು ಬಂದಿದೆ.

**ಕುಟುಂಬ ಸದಸ್ಯರಿಂದ ವೃತ್ತಿಯ ವಿರೋಧ**

ಪರಿಶಿಷ್ಟ ಜಾತಿಯ ಯುವ ವಕೀಲರು ತಮ್ಮ ವೃತ್ತಿ ಜೀವನವನ್ನು ಆಯ್ಕೆ ಮಾಡಿಕೊಂಡಾಗ, ಅವರ ಕುಟುಂಬದ ಸದಸ್ಯರಿಂದಲೇ ವೃತ್ತಿಗೆ ವಿರೋಧ ವ್ಯಕ್ತವಾಗುತ್ತದೆ. ಬಹುತೇಕ ಪರಿಶಿಷ್ಟ ಜಾತಿಯ ಕುಟುಂಬಗಳು ಆರ್ಥಿಕವಾಗಿ ಹಿಂದುಳಿದಿರುತ್ತವೆ. ಮಗ ಅಥವಾ ಮಗಳು ಓದಿ ಮುಗಿಸಿದ ತಕ್ಷಣ ಕೆಲಸಕ್ಕೆ ಸೇರಿ ಕುಟುಂಬವನ್ನು ಸಲಹುತ್ತಾರೆ ಎಂಬ ದೊಡ್ಡ ನಿರೀಕ್ಷೆ ಹೆತ್ತವರಲ್ಲಿ ಇರುತ್ತದೆ. ವಕಾಲತ್ತು ವೃತ್ತಿಯಲ್ಲಿ ಆರಂಭಿಕ 3 ರಿಂದ 5 ವರ್ಷ ಯಾವುದೇ ಸ್ಥಿರ ಆದಾಯ ಇರುವುದಿಲ್ಲ. ಈ ಸುದೀರ್ಘ ಕಾಯುವಿಕೆಯನ್ನು ಸಹಿಸಲು ಸಾಧ್ಯವಾಗದ ಕುಟುಂಬಸ್ಥರು, ವಕೀಲಿ ವೃತ್ತಿ ಬಿಟ್ಟು ತಕ್ಷಣ ಹಣ ತರುವ ಬೇರೆ ಯಾವುದಾದರೂ ಖಾಸಗಿ ಕೆಲಸ ಅಥವಾ ಸರ್ಕಾರಿ ನೌಕರಿಗೆ ಸೇರುವಂತೆ ಒತ್ತಾಯಿಸುತ್ತಾರೆ. ಆದರೆ ಕೆಲವು ಕುಟುಂಬದವರು ವೃತ್ತಿ ಗೌರವ ಹಾಗೂ ಇತರ ಕಾರಣಗಳಿಗಾಗಿ ವೃತ್ತಿಯಲ್ಲಿ ಮುಂದುವರೆಯಲು ಇಚ್ಚಿಸುತ್ತಾರೆ.

**ಕೋಷ್ಟಕ 2: ಕುಟುಂಬದ ಸದಸ್ಯರು ವಕೀಲ ವೃತ್ತಿಯನ್ನು ಮುಂದುವರೆಸುವುದನ್ನು ವಿರೋಧಿಸುವುದರ ವಿವರ**

| **ಅಭಿಪ್ರಾಯ** | **ಆವೃತ್ತಿ** | **ಶೇಕಡವಾರು** |
|---|---|---|
| ಹೌದು | 4 | 6.7 |
| ಕೆಲವೊಮ್ಮೆ | 15 | 25.0 |
| ಇಲ್ಲವೇ ಇಲ್ಲ | 41 | 68.3 |
| ಒಟ್ಟು | 60 | 1000 |

ಈ ಮೇಲ್ಕಂಡ ಕೋಷ್ಟಕದಲ್ಲಿ ಶೇಕಡ 68.33ರಷ್ಟು ವಕೀಲರು ನಮ್ಮ ಕುಟುಂಬದಲ್ಲಿ ಯಾರೂ ವಕೀಲ ವೃತ್ತಿಯನ್ನು ವಿರೋದಿಸುತ್ತಿಲ್ಲ ಎಂಬುದಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಅಂದರೆ ಇವರ ಕುಟುಂಬಗಳಲ್ಲಿ ವೃತ್ತಿಯ ಮಹತ್ವ ತಿಳಿದುರುವುದಾಗಿದೆ. ಆದರೆ ಶೇಕಡ 6.66ರಷ್ಟು ಮಾತ್ರ ವಕೀಲರ ಕುಟುಂಬಗಳಲ್ಲಿ ವಿರೋಧಿಸುತ್ತಿರುವುದು ಕಂಡುಬಂದಿದೆ. ಹಾಗೆಯೇ ಶೇಕಡ 15ರಷ್ಟು ಮಾತ್ರ ಕೆಲವೊಮ್ಮೆ ಸಾಂಧರ್ಭಿಕ ಅನುಗುಣವಾಗಿ ವಿರೋಧಿಸುತ್ತಿರುವುದು ತಿಳಿದುಬಂದಿದೆ.

**ಕುಟುಂಬದಲ್ಲಿ ಹಣಕಾಸನ್ನು ನಿರ್ಣಯಿಸುವವರ ವಿವರ**

ಸಮಾಜದ ಸಾರ್ವತ್ರಿಕ ಸಂಸ್ಥೆಯಾದ ಕುಟುಂಬವು ಮಾನವನ ಜೀವನಕ್ಕೆ ತಳಹದಿ ಹಾಗೂ ಕೇಂದ್ರ ಬಿಂದುವಾಗಿದೆ. ವಕೀಲರು ತಮ್ಮ ಕ್ಷೇತ್ರಗಳಲ್ಲಿ ದುಡಿಯುತ್ತಿರುವುದರ ಜೊತೆಗೆ ಕುಟುಂಬದ ನಿರ್ವಹಣೆ ಜವಾಬ್ದಾರಿಯನ್ನು ಹೊತ್ತು ಮುನ್ನಡೆಸುವವರಾಗಿದ್ದಾರೆ. ಇಲ್ಲಿ ಕುಟುಂಬದ ಹೊರಗೆ ಮತ್ತು ಒಳಗೆ ಎರಡು ಪಾತ್ರಗಳನ್ನು ನಿರ್ವಹಣೆ ಮಾಡುತ್ತಿರುವುದು ನಮ್ಮ ಮುಂದೆ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಯ ವಕೀಲರ ಕುಟುಂಬಗಳಲ್ಲಿ ಹಣಕಾಸಿನ ನಿರ್ಣಯಗಳನ್ನು ನಿರ್ಣಯಿಸುವವರು ಯಾರು ಎಂಬುದನ್ನು ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಯಬಹುದು.

**ಕೋಷ್ಟಕ 3: ಕುಟುಂಬದ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುವವರ ವಿವರ.**

| **ವಿವರ** | **ಆವೃತ್ತಿ** | **ಶೇಕಡವಾರು** |
|---|---|---|
| ಪೋಷಕರು | 09 | 15.0 |
| ಸಹೋದರರು | 02 | 3.3 |
| ಪತಿ/ ಪತ್ನಿ | 13 | 21.7 |
| ಸ್ವತಃ | 09 | 15.0 |
| ಜಂಟಿಯಾಗಿ | 27 | 45.0 |
| ಒಟ್ಟು | 60 | 100.0 |

ಈ ಮೇಲ್ಕಂಡ ಕೋಷ್ಟಕವನ್ನು ಗಮನಿಸಿದಾಗ ಶೇಕಡ 45ರಷ್ಟು ಪರಿಶಿಷ್ಟ ಜಾತಿಯ ವಕೀಲರ ಕುಟುಂಬಗಳಲ್ಲಿ ಪತಿ–ಪತ್ನಿಯೂ ಜಂಟಿಯಾಗಿ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುತ್ತಾರೆ. ಶೇಕಡ 15ರಷ್ಟು ಪರಿಶಿಷ್ಟ ಜಾತಿಯ ವಕೀಲರು ತಾವೇ ಸ್ವತಃ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುತ್ತಿದ್ದು, ಶೇಕಡ 3.33ರಷ್ಟು ಮಾತ್ರ ಸಹೋದರರು ಕುಟುಂಬಗಳಲ್ಲಿ ಹಣಕಾಸಿನ ವ್ಯವಹಾರವನ್ನು ನಿರ್ವಹಿಸುತ್ತಿದ್ದಾರೆ. ಅಂದರೆ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿಯ ವಕೀಲರ ಕುಟುಂಬಗಳಲ್ಲಿ ಗಂಡ–ಹೆಂಡತಿ ಇಬ್ಬರೂ ಸೇರಿ ಹಣಕಾಸಿನ ವ್ಯವಹಾರ ನಡೆಸುತ್ತಿರುವುದು ಕಂಡುಬಂದಿದೆ.

**ಆದಾಯವನ್ನು ಅಪೇಕ್ಷಿಸುವುದರ ವಿವರ**

ಕುಟುಂಬದ ನಿರ್ವಹಣೆಯಲ್ಲಿ ಪರಿಶಿಷ್ಟ ಜಾತಿಯ ವಕೀಲರ ಪಾತ್ರ ಬಹು ಮುಖ್ಯವಾದದ್ದು. ಕುಟುಂಬದ ಒಳಗೆ ಮತ್ತು ಹೊರಗೆ ದುಡಿಯುತ್ತಿರುವ ವಕೀಲರ ಆದಾಯವು ತಕ್ಕ ಮಟ್ಟಿಗೆ ಸಾಕಾಗುತ್ತದೆ. ಆದರೆ ಕೆಲವು ಕುಟುಂಬದ ಸದಸ್ಯರು ಹೆಚ್ಚಿನ ಆದಾಯವನ್ನು ಕುಟುಂಬದ ನಿರ್ವಹಣೆಗಾಗಿ ನೀಡಬೇಕೆಂದು ಅಪೇಕ್ಷಿಸುತ್ತಾರೆ. ಈ ಹಿನ್ನಲೆಯಲ್ಲಿ ಪರಿಶಿಷ್ಟ ಜಾತಿಯ ವಕೀಲರ ಕುಟುಂಬ ಸದಸ್ಯರು ಅವರ ಆದಾಯವನ್ನು ಕುಟುಂಬಕ್ಕೆ ನೀಡಬೇಕೆಂದು ಅಪೇಕ್ಷಿಸುವುದರ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

**ಕೋಷ್ಟಕ 4: ಕುಟುಂಬದ ಸದಸ್ಯರು ಆದಾಯವನ್ನು ಕುಟುಂಬದವರಿಗೆ ನೀಡಬೇಕೆಂದು ಅಪೇಕ್ಷಿಸುವವರ ವಿವರ**

| ಅಭಿಪ್ರಾಯ | ಆವೃತ್ತಿ | ಶೇಕಡವಾರು |
|---|---|---|
| ಹೌದು ಯಾವಾಗಲೂ | 48 | 80.0 |
| ಕೆಲವೊಮ್ಮೆ | 08 | 13.3 |
| ಇಲ್ಲವೇ ಇಲ್ಲ | 4 | 6.7 |
| ಒಟ್ಟು | 60 | 100.0 |

ಕೋಷ್ಟಕದ ಪ್ರಕಾರ ಕುಟುಂಬದ ಸದಸ್ಯರು ವಕೀಲರು ತರುವ ಆದಾಯವನ್ನು ಕುಟುಂಬದವರಿಗೆ ನೀಡಬೇಕೆಂದು ಬಯಸುವುದರ ವಿವರವನ್ನು ತಿಳಿಸುತ್ತದೆ. ಶೇಕಡ 80ರಷ್ಟು ವಕೀಲರ ಕುಟುಂಬದ ಸದಸ್ಯರು ಇವರು ತರುವ ಆದಾಯವನ್ನು ಅಪೇಕ್ಷಿಸುತ್ತಾರೆ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಹಾಗೆಯೇ ಕೇವಲ ಶೇಕಡ 6.66ರಷ್ಟು ವಕೀಲರ ಕುಟುಂಬದ ಸದಸ್ಯರು ಇವರು ತರುವಂತಹ ಆದಾಯವನ್ನು ಬಯಸುತ್ತಿರಲಿಲ್ಲ ಎಂದೂ ತಿಳಿದುಬಂದಿದೆ. ಫಲಿತಾಂಶದಲ್ಲಿ ಕಂಡುಬಂದಂತೆ ಕುಟುಂಬದ ನಿರ್ವಹಣೆಗೆ ಪರಿಶಿಷ್ಟ ಜಾತಿಯ ವಕೀಲರ ಆದಾಯವು ಬಹು ಮುಖ್ಯವಾಗಿದೆ.

## ವ್ಯಕ್ತವಾದ ಅಂಶಗಳು

***ದೈನಂದಿನ ಆರ್ಥಿಕ ನಿರ್ವಹಣೆಯ ಬಿಕ್ಕಟ್ಟು ಸ್ಥಿರ ಆದಾಯದ ಕೊರತೆ***

ವಕೀಲ ವೃತ್ತಿಯ ಆರಂಭಿಕ ವರ್ಷಗಳಲ್ಲಿ ಮಾಸಿಕ ಸಂಬಳ ಅಥವಾ ಸ್ಥಿರ ಆದಾಯ ಇರುವುದಿಲ್ಲ. ಇದರಿಂದಾಗಿ ಮನೆ ಬಾಡಿಗೆ, ರೇಷನ್, ಕರೆಂಟ್ ಬಿಲ್‌ನಂತಹ ದೈನಂದಿನ ಕೌಟುಂಬಿಕ ವೆಚ್ಚಗಳನ್ನು ನಿಭಾಯಿಸುವುದು ಅತ್ಯಂತ ಕಷ್ಟಕರವಾಗುತ್ತದೆ. ಆರ್ಥಿಕ ಹಿನ್ನೆಲೆ ಇಲ್ಲದ ಕಾರಣ, ಕುಟುಂಬದ ತುರ್ತು ಅಗತ್ಯಗಳಿಗಾಗಿ ಹೊರಗಡೆ ಹೆಚ್ಚಿನ ಬಡ್ಡಿಗೆ ಸಾಲ ಮಾಡಬೇಕಾಗುತ್ತದೆ. ಇದು ಕುಟುಂಬವನ್ನು ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ತಳ್ಳುತ್ತದೆ.

***ಹೆತ್ತವರ ಮತ್ತು ಒಡಹುಟ್ಟಿದವರ ಜವಾಬ್ದಾರಿ ಏಕೈಕ ಆಸರೆ***

ಸಮುದಾಯದ ಬಹುತೇಕ ವಕೀಲರು ತಮ್ಮ ಇಡೀ ಕುಟುಂಬದಲ್ಲಿ ಉನ್ನತ ಶಿಕ್ಷಣ ಪಡೆದ ಮೊದಲ ವ್ಯಕ್ತಿಯಾಗಿರುತ್ತಾರೆ. ಹಾಗಾಗಿ, ವಯಸ್ಸಾದ ಹೆತ್ತವರ ವೈದ್ಯಕೀಯ ವೆಚ್ಚ ಹಾಗೂ ಒಡಹುಟ್ಟಿದವರ ಶಿಕ್ಷಣ ಮತ್ತು ಮದುವೆಯ ಜವಾಬ್ದಾರಿ ಇವರ ಮೇಲೆಯೇ ಇರುತ್ತದೆ.ಕುಟುಂಬಸ್ಥರು ಇವರ ವೃತ್ತಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳದೆ, ತಕ್ಷಣವೇ

ಆರ್ಥಿಕ ನೆರವು ನಿರೀಕ್ಷಿಸುವುದರಿಂದ ಕುಟುಂಬ ನಿರ್ವಹಣೆಯಲ್ಲಿ ಭಿನ್ನಾಭಿಪ್ರಾಯಗಳು ಮೂಡುತ್ತವೆ.

***ಮಕ್ಕಳ ಶಿಕ್ಷಣ ಮತ್ತು ಭವಿಷ್ಯದ ಆತಂಕಗುಣಮಟ್ಟದ ಶಿಕ್ಷಣದ ವೆಚ್ಚ***

ವೃತ್ತಿಯಲ್ಲಿ ಸ್ಥಿರತೆ ಸಿಗುವವರೆಗೆ ಮಕ್ಕಳನ್ನು ಒಳ್ಳೆಯ ಶಾಲೆಗಳಿಗೆ ಸೇರಿಸಲು ಅಥವಾ ಅವರ ಶಾಲಾ ಶುಲ್ಕವನ್ನು ಸಮಯಕ್ಕೆ ಸರಿಯಾಗಿ ಪಾವತಿಸಲು ಸಾಧ್ಯವಾಗುವುದಿಲ್ಲ. ಯಾವುದೇ ಜೀವ ವಿಮೆ ಅಥವಾ ಉಳಿತಾಯ ಮಾಡಲು ಸಾಧ್ಯವಾಗದಿರುವುದರಿಂದ, ತನ್ನ ನಂತರ ಕುಟುಂಬದ ಸ್ಥಿತಿ ಏನಾಗಬಹುದು ಎಂಬ ಆತಂಕ ಇವರನ್ನು ಸದಾ ಕಾಡುತ್ತದೆ.

***ಸಮಯದ ಕೊರತೆ ಮತ್ತು ಕುಟುಂಬದ ನಿರ್ಲಕ್ಷ್ಯದೀರ್ಘಾವಧಿ ಕೆಲಸ***

ನ್ಯಾಯಾಲಯದ ಸಮಯದ ನಂತರವೂ ಕಚೇರಿಯಲ್ಲಿ ತಡರಾತ್ರಿಯವರೆಗೆ ಕೇಸ್ ಸ್ಟಡಿ, ಕರಡು ಸಿದ್ಧತೆ (Drafting) ಮತ್ತು ಸಂಶೋಧನೆ ಮಾಡಬೇಕಾಗುತ್ತದೆ. ಕುಟುಂಬದ ಸದಸ್ಯರೊಂದಿಗೆ, ವಿಶೇಷವಾಗಿ ಪತ್ನಿ ಮತ್ತು ಮಕ್ಕಳೊಂದಿಗೆ ಕಳೆಯಲು ಸಮಯ ಸಿಗುವುದಿಲ್ಲ. ಹಬ್ಬ, ಹರಿದಿನ ಅಥವಾ ಕೌಟುಂಬಿಕ ಸಮಾರಂಭಗಳಲ್ಲಿ ಭಾಗವಹಿಸಲು ಸಾಧ್ಯವಾಗದೆ ಕೌಟುಂಬಿಕ ಬಾಂಧವ್ಯಗಳು ದುರ್ಬಲಗೊಳ್ಳುತ್ತವೆ.

**ಆರೋಗ್ಯ ನಿರ್ವಹಣೆಯ ಸಮಸ್ಯೆಗಳು ಮಾನಸಿಕ ಮತ್ತು ದೈಹಿಕ ಒತ್ತಡ**

ಕೋರ್ಟ್ ಮತ್ತು ಕೌಟುಂಬಿಕ ಒತ್ತಡಗಳ ನಡುವೆ ಸಿಲುಕುವ ಇವರಿಗೆ ಸರಿಯಾದ ಸಮಯಕ್ಕೆ ಊಟ, ನಿದ್ರೆ ಸಿಗುವುದಿಲ್ಲ. ಇದು ಅವರ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಕುಟುಂಬದ ಯಾವುದೇ ಸದಸ್ಯರಿಗೆ ಅನಾರೋಗ್ಯ ಎದುರಾದಾಗ, ದೊಡ್ಡ ಆಸ್ಪತ್ರೆಗಳ ವೆಚ್ಚವನ್ನು ಭರಿಸುವ ಆರ್ಥಿಕ ಶಕ್ತಿ ಇಲ್ಲದೆ ಕೌಟುಂಬಿಕವಾಗಿ ತೀವ್ರ ಅಸಹಾಯಕರಾಗುತ್ತಾರೆ.

***ಸಲಹೆಗಳು***

- ಆರ್ಥಿಕ ನಿರ್ವಹಣೆ ಮತ್ತು ಸರ್ಕಾರದ ಸೌಲಭ್ಯಗಳ ಬಳಕೆ
- ಸ್ಟೈಫಂಡ್ ಯೋಜನೆಗಳ ಸದುಪಯೋಗ
- ಪರ್ಯಾಯ ಆದಾಯದ ಮೂಲ ಹುಡುಕಿಕೊಳ್ಳುವುದು ಆರಂಭಿಕ ಹಂತದಲ್ಲಿ ಸಂಪೂರ್ಣವಾಗಿ ಕಕ್ಷಿದಾರರ ಫೀಸ್ ಮೇಲೆಯೇ ಅವಲಂಬಿತರಾಗದೆ, ಕಾನೂನು ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಅಥವಾ ಕಂಪನಿಗಳಿಗೆ ಅರೆಕಾಲಿಕ ಲೀಗಲ್ ಅಡ್ವೈಸರ್ ಆಗಿ ಕೆಲಸ ಮಾಡಿ ಸ್ಥಿರ ಆದಾಯ ಗಳಿಸಿ.
- ಕೌಟುಂಬಿಕ ಸಮತೋಲನ ಮತ್ತು ನಂಬಿಕೆಗಳಿಗೆ ಕುಟುಂಬಕ್ಕೆ ವೃತ್ತಿಯ ಸ್ವರೂಪ ತಿಳಿಸುವುದು:
- ವಕೀಲಿ ವೃತ್ತಿಯಲ್ಲಿ ಆರಂಭಿಕ ವರ್ಷಗಳಲ್ಲಿ ಹಣ ಗಳಿಸುವುದು ಕಷ್ಟ ಎಂಬ ಸತ್ಯವನ್ನು ಪತ್ನಿ, ಹೆತ್ತವರಿಗೆ ಮುಕ್ತವಾಗಿ ಮನವರಿಕೆ ಮಾಡಿಕೊಡುವುದು.
- ಭವಿಷ್ಯದ ಯಶಸ್ಸಿನ ಕುರಿತು ಅವರಲ್ಲಿ ಭರವಸೆ ಮೂಡಿಸುವುದು
- ಸಮಯದ ನಿರ್ವಹಣೆ ಭಾನುವಾರ ಅಥವಾ ರಜಾದಿನಗಳಲ್ಲಿ ಕನಿಷ್ಠ ಅರ್ಧ ದಿನವನ್ನು ಕಡ್ಡಾಯವಾಗಿ ಕುಟುಂಬದವರೊಂದಿಗೆ ಕಳೆಯುವುದು. ಇದು ಕೌಟುಂಬಿಕ ಬಾಂಧವ್ಯವನ್ನು ಗಟ್ಟಿಗೊಳಿಸುತ್ತದೆ ಮತ್ತು ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ.
- ಸಮುದಾಯದ ನಂಬಿಕೆ ಗಳಿಸುವುದು ಸ್ಥಳೀಯ ದಲಿತ ಮತ್ತು ಶೋಷಿತ ಸಂಘಟನೆಗಳೊಂದಿಗೆ ಒಡನಾಟ ಇಟ್ಟುಕೊಂಡು ಅವರ ಸಣ್ಣಪುಟ್ಟ ಕಾನೂನು ಸಮಸ್ಯೆಗಳಿಗೆ ಉಚಿತವಾಗಿ ಅಥವಾ ಕಡಿಮೆ ವೆಚ್ಚದಲ್ಲಿ ನೆರವು ನೀಡಬೇಕು. ಇದು

ಸಮುದಾಯದಲ್ಲಿ ನಿಮ್ಮ ಮೇಲಿನ ನಂಬಿಕೆಯನ್ನು ಹೆಚ್ಚಿಸಿ, ಭವಿಷ್ಯದಲ್ಲಿ ಹೆಚ್ಚು ಕಕ್ಷಿದಾರರು ನಿಮ್ಮ ಬಳಿ ಬರುವಂತೆ ಮಾಡುತ್ತದೆ.

**ಉಪಸಂಹಾರ**

ಪರಿಶಿಷ್ಟ ಜಾತಿಯ ವಕೀಲರು ಎದುರಿಸುತ್ತಿರುವ ಕೌಟುಂಬಿಕ ಮತ್ತು ಆರ್ಥಿಕ ಸವಾಲುಗಳು ಕೇವಲ ಅವರ ವೈಯಕ್ತಿಕ ಸಮಸ್ಯೆಗಳಲ್ಲ, ಅವು ಸಾಮಾಜಿಕ ಅಸಮಾನತೆಯ ಪ್ರತಿಬಿಂಬಗಳಾಗಿವೆ. ವಕೀಲರು ಕೌಟುಂಬಿಕ ಹೊಣೆಗಾರಿಕೆಗಳ ಒತ್ತಡದ ನಡುವೆಯೂ ವಕಾಲತ್ತು ವೃತ್ತಿಯಲ್ಲಿ ಮುಂದುವರಿಯಲು ಸಮಾಜ ಮತ್ತು ನ್ಯಾಯಾಂಗ ವ್ಯವಸ್ಥೆಯ ಪ್ರೋತ್ಸಾಹ ಅತ್ಯಗತ್ಯವಾಗಿದೆ. ಸರ್ಕಾರಗಳು ವಕೀಲರಿಗೆ ನೀಡುವ ಸ್ಟೈಫಂಡ್ ಮೊತ್ತವನ್ನು ಹೆಚ್ಚಿಸುವುದು, ಕಚೇರಿ ಸ್ಥಾಪನೆಗೆ ಆರ್ಥಿಕ ನೆರವು ನೀಡುವುದು ಮತ್ತು ಹಿರಿಯ ವಕೀಲರು ಇವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಇಂದಿನ ಅಗತ್ಯವಾಗಿದೆ. ಈ ಸವಾಲುಗಳನ್ನು ಯಶಸ್ವಿಯಾಗಿ ಮೆಟ್ಟಿ ನಿಲ್ಲುವ ಮೂಲಕ ಮಾತ್ರ ಪರಿಶಿಷ್ಟ ಜಾತಿಯ ವಕೀಲರು ಕೌಟುಂಬಿಕವಾಗಿ ಸ್ಥಿರತೆ ಸಾಧಿಸಲು ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಶೋಷಿತ ಸಮುದಾಯಗಳ ಪರವಾಗಿ ಸಮರ್ಥ ಧ್ವನಿಯಾಗಿ ಮೂಡಿಬರಲು ಸಾಧ್ಯವಾಗುತ್ತದೆ

**ಪರಾಮರ್ಶನ ಗ್ರಂಥಗಳು**


- *ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಮತ್ತು ಇತ್ತೀಚಿನ ಲಿಂಗ ಆಧಾರಿತ ವರದಿಗಳು (2026)*
- ಪ್ರಭು, ಕೆ.ಎಚ್. (2002) '*ವಕೀಲರ ಕಾನೂನು ಸಂಬಂಧಿ ನೀತಿ ನಿಯಮಗಳ ಕೈಪಿಡಿ*'
- *ಅಮೆರಿಕನ್ ಬಾರ್ ಅಸೋಸಿಯೇಷನ್ ವರದಿ.*
- ಎಸ್‌ಎಸ್‌ಆರ್‌ಎನ್ (SSRN) ಮತ್ತು ಇವಿಎ ಫೌಂಡೇಶನ್ ಸಂಶೋಧನಾ ಪ್ರಬಂಧ (2025)
- Bhandarkar, P.L. and Wiikinson (1994). *Methodology and Techniques of Research*. Himalaya Publishing House, Bombay.
- Chandrashekar (1990). *Sociological Study of Advocates : A Case Study of Gulbarga Court*.
- Gandhi, T.S. (1995). *Lawyers and Touts : A Study in the Sociology of the Legal Profession*. Hindustan Publishing Corporation of India, Delhi.